# ಪಿರಮಿಡ್ ಕಾಲ್ ಸರ್ವೀಸಸ್ ಬೆಂಗಳೂರು

ಒಂದೇ ಒಂದು ಫೋನ್ ಕಾಲ್
ನಿಮ್ಮ ಸಂಪೂರ್ಣ ಜೀವನವನ್ನು ಬದಲಾಯಿಸಬಹುದು...!

## ವಾರ್ತಾ ಪತ್ರ - ಅಕ್ಟೋಬರ್ 2021


## ಸಂಸ್ಥಾಪಕರ ಸಂದೇಶ

ಪ್ರತಿ ಕಂಬಳಿಹುಳುವಿನ ಗುರಿ ಚಿಟ್ಟೆಯಾಗುವುದೊಂದೇ. ಇದು ಜೈವಿಕ ರೂಪಾಂತರ.
ಒಂದು ಕಂಬಳಿ ಹುಳು ಮುಂದೆ ಒಂದು ದಿನ ತಾನು ಹಾರುತ್ತೇನೆ ಎಂದು ಊಹಿಸಲೂ ಸಾಧ್ಯವಿಲ್ಲ. ಆ ಕಂಬಳಿ ಹುಳುವಿಗೆ ... ನಾನು ಒಂದು ಕಡೆ ಸಿಕ್ಕಿಕೊಂಡಿದ್ದೇನೆ, ನಾನು ತೆವಳುತ್ತೇನೆ, ನಾನು ಕುರೂಪಿ, ನಾನು ಬರೀ ತಿನ್ನುತ್ತಿದ್ದೇನೆ. ಇವನ್ನು ಬಿಟ್ಟರೆ ಬೇರೇನೂ ಮಾಡುತ್ತಿಲ್ಲ... ಎನ್ನುವುದೇ ತನ್ನ ಬಗ್ಗೆ ತನಗೆ ಇರುವ ಅಭಿಪ್ರಾಯವಾಗಿರುತ್ತದೆ.

ಆ ಹುಳು ಬಹುಬೇಗನೆ ಚಿಟ್ಟೆಯಾಗುವ ವಿಷಯ ಅದಕ್ಕೆ ತಿಳಿದಿರುವುದೇ ಇಲ್ಲ. ಚಿಟ್ಟೆ ವಿವಿಧ ಬಣ್ಣಗಳಿಂದ ಕೂಡಿ ಸುಂದರವಾಗಿ ಹಾರಾಡುತ್ತದೆ. ನಾವು ಯಾರೂ ಕಂಬಳಿ ಹುಳುವನ್ನು ನೋಡಲು ಇಷ್ಟಪಡುವುದಿಲ್ಲ ಆದರೆ, ಚಿಟ್ಟೆಯನ್ನು ನೊಡಲು ಇಷ್ಟಪಡುತ್ತೇವೆ. ಧ್ಯಾನಕ್ಕಿಂತ ಮೊದಲು ನಾನು Mr.Patri ಆಗಿದ್ದೆ. ಧ್ಯಾನದ ನಂತರ ನಾನು Master Patri ಆಗಿರುವೆ. ನೀವು ಚಿಟ್ಟೆಯಾಗಿದ್ದೀರೆಂದರೆ ನೀವು ಒಮ್ಮೆ ಕಂಬಳಿಹುಳು ಆಗಿದ್ದಿರಿ ಎಂದರ್ಥ.


ಪ್ರತಿಯೊಬ್ಬ ಮನುಷ್ಯನೂ ಧ್ಯಾನಕ್ಕಿಂತ ಮೊದಲು ಈ ಹುಳುವಿನಂತೆ - ಸದಾ ತೆವಳುತ್ತಾ, ಕುರೂಪಿಯಾಗಿ ತಿನ್ನುವುದು, ಮಲಗುವುದು ಇಷ್ಟನ್ನೇ ಮಾಡುತ್ತಾನೆ. ಧ್ಯಾನವನ್ನು ಕಲಿತನಂತರ ಪ್ರತಿಯೊಬ್ಬ ಮನುಷ್ಯನೂ ಚಿಟ್ಟೆಯಂತೆ ಬದಲಾಗುತ್ತಾನೆ. ನೀವು ಚಿಟ್ಟೆಯಾಗಬೇಕು. ಪ್ರತಿಯೊಬ್ಬ ಮಿಸ್ಟರ್ ಕೂಡ ಮಾಸ್ಟರ್ ಆಗಬೇಕು. ಪ್ರತಿ ಮಿಸ್ ಕೂಡ ಮಾಸ್ಟರ್ ಆಗಬೇಕು.
ಕಂಬಳಿಹುಳುವು ಒಂದು ದಿನ ಬಣ್ಣದ ಚಿಟ್ಟೆಯಾಗುತ್ತದೆ. ಪ್ರತಿಯೊಬ್ಬರ ಜೀವನದಲ್ಲೂ ಧ್ಯಾನವು ಬದಲಾವಣೆಯನ್ನು ತರುತ್ತದೆ. ಅಗಾಧವಾದ ವ್ಯತ್ಯಾಸವನ್ನೇ ತೋರುತ್ತದೆ. ನಿಮ್ಮ ಜಿವನದಲ್ಲಿ ಬದಲಾವಣೆ ಕಾಣಬೇಕಾದರೆ ನಿವು ಧ್ಯಾನವನ್ನು ಮಾಡಲೇಬೇಕು.

ಎಷ್ಟು ಧ್ಯಾನ ಮಾಡುತ್ತೀರೋ ಅಷ್ಟು ಬದಲಾವಣೆ ಬರುತ್ತದೆ. ಅದನ್ನು ನೀವೇ ಕಾಣುತ್ತೀರಿ.
ಕಂಬಳಿಹುಳು ಹಾಗೂ ಚಿಟ್ಟೆ, ಧ್ಯಾನಕ್ಕಿಂತ ಮೊದಲು ಮತ್ತು ಧ್ಯಾನದ ನಂತರ ಶರೀರದಲ್ಲಿ ಬದಲಾವಣೆ ಇರುವುದಿಲ್ಲ. ಆದರೆ, ಮನಸ್ಸು ಪರಿವರ್ತನೆಗೊಳ್ಳುತ್ತದೆ. ಮನಸ್ಸು ಕಂಬಳಿ ಹುಳುವಿನ ಹಂತದಿಂದ ಚಿಟ್ಟೆಯ ಹಂತಕ್ಕೆ ಪರಿವರ್ತನೆಗೊಳ್ಳುತ್ತದೆ.
ಚಿಟ್ಟೆ ಎಂದರೆ ನೀವು ಆತ್ಮ ಸಾಕ್ಷಾತ್ಕಾರವನ್ನು ಪಡೆದಿರುವಿರೆಂದು ಅರ್ಥ.



**ಬ್ರಹ್ಮರ್ಷಿ ಪಿತಾಮಹ ಪತ್ರೀಜಿ**

## ಮುಖ್ಯ ಮಾರ್ಗದರ್ಶಕರ ಸಂದೇಶ



**ಡಾ|| ಗಿರಿಸ್ವಾಮಿ ಹಳ್ಳದ**
MBBS,MS-OPH,FCAS
ನೇತ್ರ ಶಸ್ತ್ರ ಚಿಕಿತ್ಸ ತಜ್ಞರು

ಜೀವನದ ಮಾಧುರ್ಯವನ್ನು ಸವಿಯಲು **ತಾಳ್ಮೆ** , **ಆರೋಗ್ಯ, ಆನಂದ, ಶಾಂತಿ, ಸಮೃದ್ಧಿ, ಸಂತೃಪ್ತಿ, ಸಮತ್ವ, ಸಮಾಧಾನ, ಸಾಮರಸ್ಯ, ಸಹನೆ, ಸಾಧನೆ**ಯಂತಹ 11 ಅಂಶಗಳು ಅಗತ್ಯ. `ತಾಳಿದವನು ಬಾಳಿಯಾನು'ಎನ್ನುವ ಗಾದೆಯಂತೆ ತಾಳ್ಮೆ ಇದ್ದರೆ ಏಕಾಗ್ರತೆಯಿಂದ, ಮನೋತಲ್ಲೀನತೆಯಿಂದ ಕೆಲಸ ಮಾಡುತ್ತೇವೆ, ಆರೋಗ್ಯ ವೃದ್ಧಿಯಾಗುತ್ತದೆ. ಮನೋದೈಹಿಕ ಕಾಯಿಲೆಗಳು ಬರುವುದಿಲ್ಲ. ತಾಳ್ಮೆ ಪೂರ್ಣ ಆರೋಗ್ಯಕ್ಕೆ ಪೂರಕ. ಶಾಂತಿ ಇದ್ದಾಗ ಸಕಾರಾತ್ಮಕ ಭಾವನೆಗಳು ಸೃಷ್ಟಿಯಾಗುತ್ತವೆ. ಮತ್ತು ಮಾನಸಿಕ ಚಂಚಲತೆ, ದಂದ್ವಗಳು ಕಡಿಮೆಯಾಗುತ್ತವೆ. ಸಮತ್ವ ಪ್ರಾಪ್ತಿಯಾಗುತ್ತದೆ.

ಅದರಿಂದ ಸುಖ, ಸಮೃದ್ಧಿಯಾಗುತ್ತದೆ. ಯಾವಾಗ ಸಂತೃಪ್ತಿ (ಆತ್ಮತೃಪ್ತಿ) ಇರುತ್ತದೋ ದುಃಖಕ್ಕೆ ಮೂಲವಾದ ಅತಿ ಆಸೆಗಳು ದೂರವಾಗಿ ಸಮಾಧಾನ ಸಿಗುತ್ತದೆ. ಹೇಗೆ ಶಿವನ ಸಂಸಾರದಲ್ಲಿ ಹುಲಿ - ನಂದಿ, ನವಿಲು - ಹಾವು, ಹಾವು - ಮೂಶಕಗಳಂತಹ ವಿರುದ್ಧ ಪಾತ್ರಗಳು ಇದ್ದರೂ ಸಹ ಶಿವನ ಸಂಸಾರ ಸಾಮರಸ್ಯಕ್ಕೆ ಪ್ರತೀಕ, ಇದೆ ರೀತಿ ನಾವು ಜೀವಿಸಬೇಕು. ಪರಿಶ್ರಮ ಪಡುವಾಗ ಕಷ್ಟಗಳನ್ನು ಸಹಿಸಲು ಸಹನೆ ಅಗತ್ಯ. ದಿನ ನಿತ್ಯ ವಿವಿಧ ಪರಿಸ್ಥಿತಿಗಳಲ್ಲಿ ವಿವಿಧ ಕೆಲಸ ಕಾರ್ಯಗಳನ್ನು ನಿಭಾಯಿಸುವಾಗ ಒಂದಕ್ಕೊಂದು ಪೂರಕವಾದಂತಹ ಈ 11 ಅಂಶಗಳನ್ನು ಅಗತ್ಯಕ್ಕೆ ತಕ್ಕಂತೆ ಅಳವಡಿಸಿಕೊಂಡು ಬಳಸಬೇಕು.

ಈ ಸಾಮರ್ಥ್ಯ ನಮಗಿದೆಯೋ ಇಲ್ಲವೋ ಎಂದು ತಿಳಿಯಲು ನಮ್ಮನ್ನು ನಾವು ಪರೀಕ್ಷಿಸಿಕೊಳ್ಳಬೇಕು. ಅದಕ್ಕಾಗಿ ಸಾಧನೆ ಮಾಡಬೇಕು. ಈ ಸಾಧನೆಯೇ ಧ್ಯಾನ, ಸ್ವಾಧ್ಯಾಯ, ಸಜ್ಜನಸಾಂಗತ್ಯ ಮತ್ತು ಅಹಿಂಸಾತ್ಮಕ ಜೀವನ, ಇದೆ ಸರಿಯಾದ ಜೀವನ ಕ್ರಮ ಅಂದರೆ ಸರಿಯಾಗಿ ಜೀವಿಸುವುದು. ಈ ಜೀವನದ ಮಾಧುರ್ಯವನ್ನು ಸವಿಯಲು ಧ್ಯಾನ ಮತ್ತು ಆಧ್ಯಾತ್ಮಿಕ ತತ್ವಗಳ ಮೂಲಕ ನಾವು ಸರಿಯಾಗಿ ಜೀವಿಸಲು ಕಲಿಯುತ್ತೇವೆ ಹಾಗೂ ಕಲಿಯೋಣ ಮತ್ತು ಕಲಿಸೋಣ.

# 21 ದಿನಗಳ ಆತ್ಮಜ್ಞಾನ ಸರಣಿ



**ಶ್ರೀ ಅಯ್ಯಪ್ಪ ಪಿಂಡಿರವರು ಕನ್ನಡ ಭಾಷೆಯಲ್ಲಿ PCSB ಪ್ಲಾಟ್‌ಫಾರ್ಮ್ ಮುಖಾಂತರ 21 ದಿನಗಳ ಆತ್ಮಜ್ಞಾನ – 1 ಏಪ್ರಿಲ್ ತಿಂಗಳಿನಲ್ಲಿ, ಆತ್ಮಜ್ಞಾನ – 2 ಜೂನ್ ತಿಂಗಳಿನಲ್ಲಿ ಬಹಳ ಅದ್ಭುತವಾಗಿ ನಡೆಸಿಕೊಟ್ಟರು. ಹಲವಾರು ಕರ್ನಾಟಕದ ಜನತೆ ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ಧ್ಯಾನದಲ್ಲಿ ಆಸಕ್ತಿಯನ್ನು ಪಡೆದು ಮಾಸ್ಟರ್ಸ್ ಆಗಿದ್ದಾರೆ. ಪ್ರತಿದಿನ ಆಳವಾದ ಧ್ಯಾನದ ಜೊತೆ ಹಲವಾರು ಆಧ್ಯಾತ್ಮಿಕ ವಿಷಯಗಳ ಜ್ಞಾನವನ್ನು ನೀಡಿದರು.**



ಅಯ್ಯಪ್ಪ ಪಿಂಡಿ ಅವರು ನಡೆಸಿಕೊಟ್ಟ ಆತ್ಮಜ್ಞಾನ 21 ದಿನಗಳ ಸರಣಿಯಲ್ಲಿ ನಾನು ಭಾಗವಹಿಸಿದೆ...ಹಲವಾರು ವಿಷಯಗಳನ್ನು ತಿಳಿದುಕೊಂಡೆ. ನಾನು ಶರೀರವಲ್ಲ ನಾನು ಆತ್ಮವೆಂದು ತಿಳಿದುಕೊಂಡೆನು, ನಾನು ನೆಗೆಟಿವ್ ಮಾತನಾಡುವುದನ್ನು ಬಿಟ್ಟುಬಿಟ್ಟೆನು, ನಾನು ಆಧ್ಯಾತ್ಮಿಕ ಪುಸ್ತಕ ಓದುವುದನ್ನು ಕಲಿತೆನು, ನಾನು ಜನನ ಮರಣದ ಬಗ್ಗೆ ತಿಳಿದುಕೊಂಡನು, ನಾನು ಅಯ್ಯಪ್ಪ ಪಿಂಡಿ ಗುರುಗಳಿಂದ ನನ್ನ ಜೀವನದ ದಿಕ್ಕನ್ನೇ ಬದಲಿಸಿಕೊಂಡೆನು.

**ಮಲ್ಲಿಕಾರ್ಜುನ್ ಬೆನಾಕಿ**



ಅಯ್ಯಪ್ಪ ಸರ್ ಅವರ ಮಾರ್ಗದರ್ಶನದಲ್ಲಿ ನನ್ನಲ್ಲಿ ಬಹಳಷ್ಟು ಬದಲಾವಣೆಗಳಾದವು ಜೀವನದ ಉದ್ದೇಶದ ಅರಿವಾಯಿತು.ಅವರೊಂದಿಗಿನ ಧ್ಯಾನ ಹಾಗೂ ಜ್ಞಾನದ ಶಕ್ತಿ ನನ್ನೊಳಗಿನ ಸುಪ್ತಾವಸ್ಥೆಯಲ್ಲಿದ್ದ ಅರಿವಿನ ಬೀಜ ಮೊಳಕೆಯೊಡೆಯಲು ಪ್ರೇರೇಪಿತ ವಾಗಿ ಧ್ಯಾನದಲ್ಲಿ ಪತ್ರೀಜಿ ಗುರುಗಳ ದರ್ಶನ ಹಾಗೂ ಗೊತ್ತಿರದ ಅನೇಕ ಭಾಷೆಗಳು ಕಣ್ಣಿನ ಮುಂದೆ ಸತತವಾಗಿ ಹಾದು ಹೋಗುತ್ತಿದ್ದವು. ಪ್ರಸ್ತುತ ಈ ರೀತಿಯ ಅನುಭವದಿಂದ ನನಗೆ ತಾನೇ ತಾನಾಗಿ ಬಹಳಷ್ಟು ಹೊಸ ಹೊಸ ವಿಷಯಗಳನ್ನು ವಿವಿಧ ಭಾಷೆಗಳನ್ನು ಕಲಿತು ತಿಳಿದ ಜ್ಞಾನವನ್ನು ಬಹಳಷ್ಟು ಜನರಿಗೆ ತಿಳಿಸಿ ಕೊಡುವ ಅವಕಾಶ ಹಾಗೂ ಆಧ್ಯಾತ್ಮಿಕ ಸೇವೆಯನ್ನು ಮಾಡುವ ಸದವಕಾಶಗಳು ಲಭ್ಯವಾಗಿವೆ.

**ವಿದ್ಯಾರಾಣಿ**
ಬೆಂಗಳೂರು



ಅಯ್ಯಪ್ಪ ಸರ್ ಅವರ ಮಾರ್ಗದರ್ಶನದಲ್ಲಿ ಎಂತಹುದೇ ವ್ಯಕ್ತಿತ್ವವಿರಲಿ ಪರಿವರ್ತನೆ ಆಗಿಯೇ ತಿರುತ್ತದೆ. ನಾನೂ ಕೂಡಾ ಹೊರತಲ್ಲ. ಅವರ ನೇರ ಸ್ಪಷ್ಟ ನಿಖರ ಹಾಗೂ ಸರಳ ಮಾತುಗಳು ನನಗೆ ಅಪಾರವಾದ ಜ್ಞಾನವನ್ನು ನೀಡಿದವು. ಅವರ ಋಣ ತೀರಿಸಲಾಗದು.

**ಮಂಜುನಾಥ,**
ಧಾರವಾಡ



## ಶಿಕ್ಷಕರಿಗೆ 21 ದಿನಗಳ ಧ್ಯಾನ ಕಾರ್ಯಕ್ರಮ

**'ದೇಶದ ಭವಿಷ್ಯ ತರಗತಿಯ ಕೂಠಡಿಗಳಲ್ಲಿ ನಿರ್ಮಾಣವಾಗುತ್ತದೆ', ಎಂಬ ನುಡಿಯಂತೆ ಇಡೀ ದೇಶದ ಭವಿಷ್ಯದ ಜವಾಬ್ದಾರಿಯನ್ನು ಹೊತ್ತಿರುವ 'ಎರಡನೆಯ ತಾಯಿ' ಎಂದು ಕರೆಯಲ್ಪಡುವ ಶಿಕ್ಷಕರಿಗಾಗಿ, ಪಿರಮಿಡ್ ಕಾಲ್ ಸರ್ವೀಸಸ್ ಬೆಂಗಳೂರು ವತಿಯಿಂದ ಪ್ರಪ್ರಥಮಬಾರಿಗೆ ಆಗಸ್ಟ್ 30 ರಿಂದ ಸೆಪ್ಟೆಂಬರ್ 19 ರವರೆಗೆ 21 ದಿನಗಳ ವಿಶೇಷ ಧ್ಯಾನ ತರಗತಿಗಳನ್ನು ಆಯೋಜಿಸಲಾಯ್ತು. ಶಿಕ್ಷಕರ ದೈಹಿಕ, ಮಾನಸಿಕ, ಭಾವನಾತ್ಮಕ ಆರೋಗ್ಯ, ಧ್ಯಾನದ ಮಹತ್ವ ಮತ್ತು ಅದರ ಲಾಭಗಳು ಹೀಗೆ ಹಲವಾರು ವಿಷಯಗಳ ಮಾಹಿತಿಯನ್ನು ಹಿರಿಯ ಮಾಸ್ಟರ್‌ಗಳ ಮೂಲಕ ನೀಡಲಾಯ್ತು. ಅದರೊಂದಿಗೆ ನಿರಂತರ ಧ್ಯಾನಸಾಧನೆ ಮಾಡುತ್ತಿರುವ ಅನೇಕ ಶಿಕ್ಷಕರ ಧ್ಯಾನಾನುಭವಗಳನ್ನೂ ಹಂಚಿಕೊಳ್ಳಲಾಯ್ತು.** ,



ಶಿಕ್ಷಕರಿಗೆ 21 ದಿನಗಳ ಕಾಲ ಆನ್‌ಲೈನ್‌ನಲ್ಲಿ ನಡೆದ ಪಿರಮಿಡ್ ಧ್ಯಾನ ತರಗತಿಗಳು ನಮ್ಮ ವೈಯಕ್ತಿಕ ಜೀವನ ನಿರ್ವಹಣೆಗೆ ಮತ್ತು ಶಿಕ್ಷಕ ವೃತ್ತಿಯ ಯಶಸ್ವಿ ನಿರ್ವಹಣೆಗೆ ಅತ್ಯಂತ ಉಪಯುಕ್ತವಾಗಿವೆ. ಸಮಾಜ ನಿರ್ಮಾಣ ಕಾರ್ಯದಲ್ಲಿ ಶಿಕ್ಷಕರ ಪಾತ್ರ ಅತ್ಯಮೂಲ್ಯವಾಗಿದ್ದು. ಈ ಧ್ಯಾನ ತರಗತಿಗಳಿಂದ ನಮ್ಮ ಮುಂದಿನ ವೃತ್ತಿ ಬದುಕಿನ ಸುಧಾರಣೆಗೆ ಸಹಕಾರಿಯಾಗಿದೆ. ಮಾರ್ಗದರ್ಶನ ಮಾಡಿದ ಎಲ್ಲಾ ಪಿರಮಿಡ್ ಮಾಸ್ಟರ್ ಗಳಿಗೆ ಧನ್ಯವಾದಗಳು.

**ನಾರಾಯಣ್ ಶಿಕ್ಷಕರು**
ಮದ್ದೂರು



ಧ್ಯಾನವು ವ್ಯಕ್ತಿಯನ್ನು ಇಡೀ ದಿನ ಹರ್ಷದಾಯಕವಾಗಿ ಕೆಲಸ ನಿರ್ವಹಿಸುವಂತೆ ಮಾಡುತ್ತದೆ. ನಾವು ಹಸನ್ಮುಖಿಗಳಾಗಿರಲು ಈ ಧ್ಯಾನವು ಸಹಕರಿಸಿದೆ. ಮತ್ತು ಉಪನ್ಯಾಸಕರುಗಳಿಂದ ನಡೆಸಿಕೊಟ್ಟ ಸತ್ಸಂಗದಂತಹ ಕಾರ್ಯಕ್ರಮಗಳಂತೂ ಜೀವನದ ಹಾದಿಗೆ ದಾರಿ ದೀಪಗಳಾಗಿದೆ. ಇದರ ಸದುಪಯೋಗ ಪಡೆದು ಜೀವನ ಸುದಾರಿಸಿದೆ. 'ಬಲ್ಲವನೆ ಬಲ್ಲ ಬೆಲ್ಲದ ಸವಿಯ' ಎಂಬಂತೆ ಧ್ಯಾನದ ಸವಿಯುಂಡವರೆ ಬಲ್ಲರು ಅದರ ಸಿಹಿಯನ್ನು.

**ಚೈತ್ರಶಾಂತರಾಜ**
ಸಹ ಶಿಕ್ಷಕಿ, ಹರಿಹರ.

## ಇನ್ಟೆನ್ಸಿವ್ ಮೆಡಿಟೇಷನ್



**ಡಾ|| ಜೀವಂಧರ್ ಕೇತಪ್ಪರವರ ಮಾರ್ಗದರ್ಶನದಲ್ಲಿ ಪ್ರತಿದಿನ ಬೆಳಿಗ್ಗೆ 5ರಿಂದ 6.30 ವರೆಗೆ ಭೂಮಿತಾಯಿಯ ಒಳಿತಿಗಾಗಿ ಇನ್ಟೆನ್ಸಿವ್ ಮೆಡಿಟೇಷನ್ ನಡೆಯುತ್ತದೆ. ಈ ಕಾರ್ಯಕ್ರಮದಲ್ಲಿ ಹಲವಾರು ಧ್ಯಾನಿಗಳು ಆಳವಾದ ಧ್ಯಾನದಲ್ಲಿ ಭಾಗವಹಿಸುತ್ತಾರೆ.**

ಧ್ಯಾನದಲ್ಲಿ ನನಗೆ ವಸುಂಧರಾ ಮಾತೆಯು ಕಾಣಿಸಿಕೊಂಡು, ಒಂದು ಸಂದೇಶವನ್ನು ನೀಡಿದಳು. ಮಣ್ಣಿನಲ್ಲಿ ಒಂದು ಹೆಣ್ಣಿನ ಆಕೃತಿಯನ್ನು ಮಾಡಿದರೆ ಅಂದರೆ ನೆಲದ ಮೇಲೆ ಕುಳಿತಿರುವಾಗ ಯಾವ ರೀತಿ ಕಾಣುತ್ತದೆಯೋ ಆ ರೀತಿಯಾಗಿ ಕಂಡಳು. ನಂತರ ನಾನು "ಯಾರಮ್ಮ ನೀನು" ಎಂದು ಅವಳನ್ನು ಪ್ರಶ್ನಿಸಿದೆ. ಅವಳು " ನಾನು ವಸುಂಧರಾ ಮಾತೆ " ಎಂದಳು. "ನೀನು ಯಾಕೆ ಈ ರೀತಿಯಲ್ಲಿ ಕುಳಿತು ಕೊಂಡಿದ್ದೀಯಾ?" ಎಂದು ಕೇಳಿದೆ. " ನಾನೂ ನನ್ನ ಅನುಭವವನ್ನು ಹಂಚಿಕೊಳ್ಳಬೇಕು ಎಂದು ಕಾಯುತ್ತಾ ಕುಳಿತಿದ್ದೇನೆ" ಎಂದಳು! ಮತ್ತೆ ನಾನು ನಗುನಗುತ್ತಾ, "ನೀನಾ, ನೀನೇನು ಅನುಭವವನ್ನು ಹಂಚಿಕೊಳ್ಳುವೆ?" ಎಂದು ಕೇಳಿದೆ. "ಹೌದು ನಾನೇ! ನೀವೆಲ್ಲರೂ ಮಾಡುತ್ತಿರುವಂತಹ ಆನಾಪಾನಸತಿ ಧ್ಯಾನದಿಂದ ನನ್ನಲ್ಲಿ ಶಕ್ತಿ ವೃದ್ಧಿಗೊಳ್ಳುತ್ತಿದೆ; ನನ್ನಲ್ಲಿ ಆ ಚೈತನ್ಯ ಶಕ್ತಿ ಹೆಚ್ಚುತ್ತಿದೆ. ಈ ಪಿರಮಿಡ್ ಧ್ಯಾನ ಮತ್ತು ನೀವು ವಸುಂಧರಾ ಮಾತೆಗಾಗಿ ಮಾಡುತ್ತಿರುವ ಉದ್ದೇಶಪೂರ್ವಕ ಧ್ಯಾನದಿಂದ ತೃಪ್ತಿ ಹೊಂದಿದ್ದೇನೆ" ಎಂದು ಮಾತೆಯು ಮಂದಹಾಸ ಬೀರಿದಳು.



**ಶಶಿ ಕೃಷ್ಣ**

## ಮಕ್ಕಳಿಗೆ ಧ್ಯಾನ ಕಾರ್ಯಕ್ರಮ

**PCSB ಪ್ಲಾಟ್‌ಫಾರ್ಮ್‌ನಲ್ಲಿ ಪ್ರತಿನಿತ್ಯ ಸಂಜೆ 5ರಿಂದ 6ರವರೆಗೆ ಮಕ್ಕಳ ಕಾರ್ಯಕ್ರಮ ನಡೆಯುತ್ತದೆ. ಹಲವಾರು ಮಕ್ಕಳು ಸಸ್ಯಾಹಾರಿಗಳಾಗಿ, ಧ್ಯಾನ ಮಾಡುತ್ತಾ, ಹಲವಾರು ಕಲೆಗಳನ್ನು ಕಲಿಯುತ್ತಾ ಈ ಕಾರ್ಯಕ್ರಮದ ಉಪಯೋಗವನ್ನು ಪಡೆಯುತ್ತಿದ್ದಾರೆ.**




**ಅನನ್ಯ**

ನನ್ನ ಹೆಸರು ಅನನ್ಯ. ನನಗೆ 6ವರ್ಷ. ಧ್ಯಾನ ಮಾಡುವಾಗ ನಾನು ನಮ್ಮ ಮನೆಯ ಮುಂದೆ ಇರುವ ಒಂದು ಹೂವಿನ ಒಳಗೆ ಚಿಕ್ಕ ಇರುವೆ ಆಗಿ ಹೋಗಿ ಆ ಹೂವಿನ ಪರಿಮಳವನ್ನು ಆನಂದಿಸಿದೆ.


ನಾನು ಯೋಗ ಮಾಡುವಾಗ ನನ್ನ ತೊಡೆಯ ಭಾಗದಲ್ಲಿ ನೋವಾಗುತ್ತಿತ್ತು. ಆಗ ಅಮ್ಮ ಧ್ಯಾನ ಮಾಡಲು ಹೇಳಿದರು. ನಾನು ಪಿರಮಿಡ್ ಹಾಕಿಕೊಂಡು ಧ್ಯಾನ ಮಾಡಿದೆ. ಆಗ ನೋವಾಗುತ್ತಿದ್ದ ನನ್ನ ತೊಡೆಯ ಭಾಗವನ್ನು ನೋಡಿಕೊಂಡೆ. ಏಕೆ ನೋವಾಗುತ್ತಿದೆ ಎಂದು ನೋಡಿದಾಗ ನರಗಳಲ್ಲಿ ನೋವು ಕಾಣಿಸಿಕೊಂಡಿತ್ತು. ಆಗ ನಾನು ಆ ನರಗಳೊಂದಿಗೆ ಮಾತನಾಡಿ  ನೋವನ್ನು ಹೀಲ್ ಮಾಡುಕೊಂಡೆ.

## PCSB ಚಾನಲ್ ವಿಶ್ಲೇಷಣೆ









## ಅನಿಸಿಕೆಗಳು



ಬ್ರಹ್ಮರ್ಷಿ ಪಿತಾಮಹ ಪತ್ರೀಜಿಯವರ ಮಹಾಸಂಕಲ್ಪದ ಒಂದು ರೂಪವೇ PCSB. ಇದು ನಿರಂತರವಾಗಿ ಆನಾಪಾನಸತಿ ಧ್ಯಾನ, ಪಿರಮಿಡ್ ಶಕ್ತಿ, ಶಾಕಾಹಾರದ ಮಹತ್ವವನ್ನು ದೊಡ್ಡವರಿಗೆ, ಮಕ್ಕಳಿಗೆ, ಶಿಕ್ಷಕರಿಗೂ ಹೀಗೆ ಕನ್ನಡದ ಎಲ್ಲಾ ಜನತೆಗೂ ಹಲವಾರು ಸೀನಿಯರ್ ಮಾಸ್ಟರ್ಸ್‌ಗಳ ಮುಖಾಂತರ ಬೋಧಿಸುತ್ತಾ ಎಲ್ಲರನ್ನೂ ಮಾಸ್ಟರರನ್ನಾಗಿ ತಯಾರು ಮಾಡುವಲ್ಲಿ PCSB ಬಹುಯಶಸ್ವಿ ಪಾತ್ರವಹಿಸಿದೆ. Phone Call ಮತ್ತು Zoom Sessionಗಳ ಮೂಲಕ ಅದ್ಭುತವಾಗಿ ಕಾರ್ಯನಿರ್ವಹಿಸುತ್ತಿರುವ PCSB ಗೆ ಹೃತ್ಪೂರ್ವಕವಾದ ಅಭಿನಂದನೆಗಳು.

**S.M.ಸುಮಂಗಳ**
PMC ಕನ್ನಡ, LIC of India, ಹಾವೇರಿ



ಪಿರಮಿಡ್ ಕಾಲ್ ಸರ್ವೀಸಸ್ (PCS) ಅನ್ನುವುದು ಪಿತಾಮಹ ಪತ್ರೀಜಿಯವರ ಕನಸು, ಆ ಕನಸನ್ನು ಕರ್ನಾಟಕ ರಾಜ್ಯದಲ್ಲಿ ಪಿರಮಿಡ್ ಕಾಲ್ ಸರ್ವೀಸಸ್, ಬೆಂಗಳೂರು ಅನ್ನುವ ಹೆಸರಿನಲ್ಲಿ ಸಾಕಾರ ಗೊಳಿಸಿರುವ ತಂಡದ ಎಲ್ಲಾ ಸದಸ್ಯರಿಗೂ ಆತ್ಮೀಯ ಧನ್ಯವಾದಗಳನ್ನು ತಿಳಿಸುತ್ತಾ, ಡಿಜಿಟಲ್ ಯುಗದಲ್ಲಿPSSM ಗೆ ಕರ್ನಾಟಕದಲ್ಲಿ ಹೊಸ ಹಾದಿ ತೋರಿಸಿರುವ PCSB ಗೆ ಜಯವಾಗಲಿ ಎಂದು ಹಾರೈಸುವ

**ನಿಮ್ಮ ಕೋಟೇಶ್ವರ ರಾವ್**
ಉಪಾಧ್ಯಕ್ಷರು, ಕರ್ನಾಟಕ ಧ್ಯಾನ ಪ್ರಗತಿ ಪರಿಷತ್



**ರಜಿತ ಕೀರ್ತಿ**
PCSB ನಿರ್ವಾಹಕರು

ಇಡೀ ಭೂಮಂಡಲಕ್ಕೆ, ಬ್ರಹ್ಮರ್ಷಿ ಪಿತಾಮಹ ಪತ್ರೀಜಿ ಅವರು PCSB ಅನ್ನುವ ಈ ವೇದಿಸೆಯನ್ನು ಎಲ್ಲರಿಗೂ ದೊಡ್ಡ ಕೊಡುಗೆಯಾಗಿ ನೀಡಿದ್ದಾರೆ. PCSB ಎನ್ನುವ ವೇದಿಕೆಯು ಎಲ್ಲರಿಗೂ ಧ್ಯಾನ ಕಲಿಸುತ್ತಾ ಅತ್ಯಂತ ಮಹತ್ತರವಾದ ಕಾರ್ಯವನ್ನು ಮಾಡುತ್ತಿದೆ. PCSB ಯಲ್ಲಿ ನಾನು ನಿರ್ವಾಹಕರಾಗಿ ಕೆಲಸ ಮಾಡಲು ಹೆಮ್ಮೆ ಯನಿಸುತ್ತದೆ.

## ಮುಂಬರುವ ಪ್ರಮಾಣಪತ್ರ ಕೋರ್ಸ್ "ನೈತಿಕ ಮತ್ತು ಯೋಗ ಶ್ರೇಷ್ಠತೆ"



**ಬ್ರಹ್ಮರ್ಷಿ**
**ಡಾ.ಬಿ. ಶಿವರಾಮಪ್ಪ ಪಿಎಚ್ಡಿ**

ವಿಶ್ವದಾದ್ಯಂತ ಮೆಚ್ಚುಗೆ ಪಡೆದ **ಆಧ್ಯಾತ್ಮಿಕ ಜಾಗೃತಿ ಶಿಕ್ಷಣ ಕಾರ್ಯಕ್ರಮ**
20 ಗಂಟೆಗಳ – ಸಾಪ್ತಾಹಿಕ ಅಧಿವೇಶನ – ಅಕ್ಟೋಬರ್ 28, 2021 ರಿಂದ
ಪ್ರತೀ ಗುರು-ಶುಕ್ರ-ಶನಿವಾರ ಸಂಜೆ 6 ರಿಂದ 7 ಗಂಟೆಯವರೆಗೆ.
**ಉಪನ್ಯಾಸ ಮಾಲಿಕೆ : ಬ್ರಹ್ಮರ್ಷಿ ಡಾ.ಬಿ. ಶಿವರಾಮಪ್ಪ PhD**
ಪ್ರಮಾಣಪತ್ರ ಪಡೆಯಲು ನೋಂದಣಿ ಕಡ್ಡಾಯವಾಗಿದೆ.
ನೋಂದಾಯಿಸಲು ನೇರವಾಗಿ ಫೋನ್ ಕರೆ ಮಾಡಬಹುದು (Ph: 70199 76260, 99866 55887) ಅಥವಾ
ಈ ಕೆಳಗಿನ ಲಿಂಕ್ ಮೇಲೆ ಕ್ಲಿಕ್ ಮಾಡಿ: https://forms.gle/34uWDuYpbgYKAMtx6
ಎಲ್ಲಾ ಸೆಷನ್ಸ್ ಹಾಜರಾಗಿ, ಪರೀಕ್ಷೆಯಲ್ಲಿ ಉತ್ತೀರ್ಣರಾದವರಿಗೆ CERTIFICATE ಕೊಡಲಾಗುತ್ತದೆ.

## ನೇರ ಪ್ರಸಾರ ಕಾರ್ಯಕ್ರಮಗಳು

ಪಿರಮಿಡ್ ಕಾಲ್ ಸರ್ವೀಸಸ್ ಬೆಂಗಳೂರು (PCSB) ಧ್ಯಾನ ಪ್ರಚಾರವೇ ಇದರ ಮುಖ್ಯ ಉದ್ದೇಶವಾಗಿದೆ. ಜನರು ಮನೆಯಲ್ಲಿದ್ದುಕೊಂಡು, ಮೊಬೈಲ್ ಮೂಲಕ ಉಚಿತವಾಗಿ ಧ್ಯಾನ ಶಿಕ್ಷಣವನ್ನು ಪಡೆಯಬಹುದು. ಪ್ರತಿದಿನ 'ಪಿರಮಿಡ್ ಕಾಲ್ ಸರ್ವೀಸಸ್ ಬೆಂಗಳೂರು' Zoom ಮತ್ತು Youtube ಮೂಲಕ ಹಲವಾರು ವೈವಿದ್ಯಮಯ ಕಾರ್ಯಕ್ರಮಗಳು ನಡೆಯುತ್ತಿವೆ.

ಪ್ರತಿದಿನ ಬೆಳಗ್ಗೆ 5.00 – 6.00 ಗಂಟೆಯ ವರೆಗೆ ಮಾರ್ಗದರ್ಶನ ಸಂಗೀತನಾದ ಧ್ಯಾನ
ಪ್ರತಿದಿನ ಮಧ್ಯಾಹ್ನ 3.00 – 4.30 ಗಂಟೆಯ ವರೆಗೆ ಸತ್ಸಂಗ ಮತ್ತು ಧ್ಯಾನ ಕಾರ್ಯಕ್ರಮ
ಪ್ರತಿದಿನ ಸಂಜೆ 5.00 – 6.00 ಗಂಟೆಯ ವರೆಗೆ ಮಕ್ಕಳಿಗೆ ಧ್ಯಾನ ಕಾರ್ಯಕ್ರಮ
ಪ್ರತಿ ಭಾನುವಾರ ಸಂಜೆ 6.00 – 6.30ರ ವರೆಗೆ ಮಕ್ಕಳಿಗೆ ಭಗವದ್ಗೀತೆಯ ಕಾರ್ಯಕ್ರಮ
ಪ್ರತಿದಿನ ರಾತ್ರಿ 9.30 – 10.30 ಗಂಟೆಯ ವರೆಗೆ ಮಾರ್ಗದರ್ಶನ ಸಂಗೀತನಾದ ಧ್ಯಾನ

ಸ್ಕೂಲ್, ಕಾಲೇಜು, ಆಫೀಸು ಮತ್ತು ಅನ್ನು ಎಲ್ಲಿ ಯಾದರೂ ಯಾರಿಗಾದರೂ ಧ್ಯಾನ ಹೇಳಿಕೊಡಬೇಕಂದಾಗ
ಈ ಕೆಳಗೆ ಇರುವ ಪಿರಮಿಡ್ ಕಾಲ್ ಸರ್ವೀಸಸ್ ನಂಬರ್‌ಗೆ ಸಂಪರ್ಕಿಸಿ.

---

**YouTube Link:**
www.youtube.com/PyramidCallServicesBengaluru/live

**Join ZOOM Meeting:**
**Meeting ID**: 982 166 3558 | **Password**: 297628


**ಪಿರಮಿಡ್ ಕಾಲ್ ಸರ್ವೀಸಸ್ ಬೆಂಗಳೂರು**
ಧ್ಯಾನ ಕಲಿಕೆಗಾಗಿ ಈಗಲೇ ಕರೆಮಾಡಿ
**+91 99029 19058, +91 87224 97146, +91 97423 02833**
ದೂರವಾಣಿ ಮೂಲಕ ಉಚಿತ ಧ್ಯಾನ ಬೋಧನೆಗಾಗಿಯೇ ಮೀಸಲಾಗಿರುವ ತಂಡ